# ಸುರತ್ಕಲ್ ಎನ್‌ಐಟಿಕೆ ಘಟಿಕೋತ್ಸವ

# 2,013 ಮಂದಿ ಪದವೀಧರರಿಗೆ ಪದವಿ ಪ್ರದಾನ



ಸುರತ್ಕಲ್, ನ. 5: ಇಲ್ಲಿನ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ(ಎನ್‌ಐಟಿಕೆ)ದ 21ನೇ ವಾರ್ಷಿಕ ಘಟಿಕೋತ್ಸವ ಶನಿವಾರ ನಡೆದಿದ್ದು, 2,013 ಮಂದಿ ಪದವಿ ಪಡೆದುಕೊಂಡರು.

138 ಪಿಎಚ್‌ಡಿ, 961 ಪಿಜಿ ಮತ್ತು 914 ಬಿ.ಟೆಕ್. ವಿದ್ಯಾರ್ಥಿಗಳು ಇದರಲ್ಲಿ ಸೇರಿದ್ದಾರೆ. 242 ಮಂದಿ ತಮ್ಮ ಬಿ.ಟೆಕ್. ಪದವಿಯೊಂದಿಗೆ ಇತರ ವಿಭಾಗಗಳಲ್ಲಿಯೂ ಪದವಿ ಪಡೆದರು. ಬಿ.ಟೆಕ್.ನ 21 ಅಭ್ಯರ್ಥಿಗಳಿಗೆ (ಆನರ್ಸ್) ಪದವಿ ನೀಡಲಾಯಿತು. 9 ಬಿ.ಟೆಕ್. ವಿದ್ಯಾರ್ಥಿಗಳು ಮತ್ತು 30 ಪಿಜಿ ವಿದ್ಯಾರ್ಥಿಗಳು ವಿವಿಧ ಏಜೆನ್ಸಿಗಳು ಪ್ರಾಯೋಜಿಸಿದ ಇನ್‌ಸ್ಟಿಟ್ಯೂಟ್ ಚಿನ್ನದ ಪದಕಗಳು ಮತ್ತು ಪದಕಗಳನ್ನು ಪಡೆದರು.

ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಎಂಜಿನಿಯರಿಂಗ್ ವಿಭಾಗದ ಬಿ.ಟೆಕ್ ವಿದ್ಯಾರ್ಥಿ ಸಿದ್ಧಾರ್ಥ್ ಎಸ್. ಅಯ್ಯರ್ 0–10 ಪಾಯಿಂಟ್ ಸ್ಕೇಲ್‌ನಲ್ಲಿ 10 ಸಿಜಿಪಿಎ ಗಳಿಸಿದ್ದಕ್ಕಾಗಿ ಮಂಡಳಿಯ ಅಧ್ಯಕ್ಷರ ಪ್ರಶಸ್ತಿ ಪಡೆದರು.

ಏರೋನಾಟಿಕಲ್ ಸೊಸೈಟಿ ಆಫ್ ಇಂಡಿಯಾದ ಅಧ್ಯಕ್ಷ, ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರ ಡಾ| ಜಿ. ಸತೀಶ್ ರೆಡ್ಡಿ ಮುಖ್ಯ ಭಾಷಣದಲ್ಲಿ ಎನ್‌ಐಟಿಕೆ ಸುರತ್ಕಲ್ ತನ್ನ ಖ್ಯಾತಿಯನ್ನು ವರ್ಷಗಳಿಂದ ಉಳಿಸಿಕೊಂಡು ಬಂದಿದೆ ಎಂದು ಶ್ಲಾಘಿಸಿದರು.

ಸಿಐಎಸ್‌ಆರ್ ನಿರ್ದೇಶಕ ಡಾ| ಆನಂದ ರಾಮಕೃಷ್ಣನ್ ಮಾತನಾಡಿ, ಪ್ರಧಾನಮಂತ್ರಿಯವರ ಮಹತ್ವಾಕಾಂಕ್ಷೆಯ 'ಅಮೃತ್ ಕಾಲ'ವನ್ನು ಸಾಕಾರಗೊಳಿಸಲು ಏಕೀಕೃತ ಪ್ರಯತ್ನದ ಅಗತ್ಯವಿದೆ ಎಂದರು.

ಎನ್‌ಐಟಿಕೆ ನಿರ್ದೇಶಕ ಪ್ರೊ| ಬಿ. ರವಿ ಪ್ರಸ್ತಾವನೆಗೈದರು.

Udayavani, Date:06/11/23, p, no -10